# ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22-02-2021 ರ ನಡವಳಿಗಳು

**ವಿಷಯದ ಸಂಖ್ಯೆ: 692/2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಜಯನಗರ ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ವಾರ್ಡ್ ಸಂಖ್ಯೆ:169ರ ಭೈರಸಂದ್ರದ ವ್ಯಾಪ್ತಿಯಲ್ಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಶದಲ್ಲಿದ್ದ ಜಯನಗರ ಈಜುಕೊಳವನ್ನು ದಿನಾಂಕ: 07-12-2004 ರಿಂದ 35 ವರ್ಷಗಳಿಗೆ ಪಿ.ಎಂ ಸ್ವಿಮ್ಮಿಂಗ್ ಸೆಂಟರ್ ರವರಿಗೆ ಗುತ್ತಿಗೆ ನೀಡಲಾಗಿರುತ್ತದೆ. ತದನಂತರ ಪಿ.ಎಂ ಸ್ವಿಮ್ಮಿಂಗ್ ಸೆಂಟರ್‌ರವರು ತಮ್ಮ ಸ್ವಂತ ಖರ್ಚಿನಲ್ಲಿ ಈಜುಕೊಳವನ್ನು ಉನ್ನತೀಕರಣಗೊಳಿಸಿರುತ್ತಾರೆ.

ತತ್ಸಂಬಂಧವಾಗಿ, ಪಿ.ಎಂ ಸ್ವಿಮ್ಮಿಂಗ್ ಸೆಂಟರ್ ರವರು ಈ ಕಛೇರಿಗೆ ಪತ್ರ ನೀಡಿ ಈಗಾಗಲೇ ಸದರಿ ಈಜುಕೊಳವನ್ನು ಉನ್ನತೀಕರಣಗೊಳಿಸಿರುವ ಹಿನ್ನಲೆಯಲ್ಲಿ ಹಾಗೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕೋವಿಡ್-19 ಸಂಬಂಧ ಜಾರಿಗೊಳಿಸುವ ಅಂಶಗಳಂತೆ ಪರಿಗಣಿಸಿ ಈಜುಕೊಳವನ್ನು ತೆರೆಯಲಾಗುವುದು ಎಂದು ಮನವಿಯನ್ನು ಸಲ್ಲಿಸುತ್ತಾ, ಸದರಿ ಈಜುಕೊಳವನ್ನು ಅಂತರರಾಷ್ಟ್ರೀಯ ಮಟ್ಟದ ಈಜುಕೊಳವನ್ನಾಗಿ ಮಾರ್ಪಾಡಿಸುವುದರ ಜೊತೆಯಲ್ಲಿ ಬಿಸಿ ನೀರು ಈಜುಕೊಳವನ್ನು ಸಹ ನಿರ್ಮಿಸಲಾಗಿರುತ್ತದೆ. ಅದರ ನಿರ್ವಹಣೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಗಳನ್ನು ನಿಯೋಜಿಸಿಕೊಳ್ಳಲು, ತರಬೇತಿಗಾರರನ್ನು ನೇಮಿಸಿಕೊಳ್ಳಲು ಈಜುಕೊಳಕ್ಕೆ ಬರುವ ವಿದ್ಯುತ್ ಶುಲ್ಕ ಇತ್ಯಾದಿ ವೆಚ್ಚಗಳು ಹೆಚ್ಚಾಗಿ ಬರುತ್ತಿರುವುದರಿಂದ ಸದರಿ ವೆಚ್ಚಗಳನ್ನು ಭರಿಸಿಕೊಳ್ಳಲು ಈಜುಕೊಳಕ್ಕೆ ಬರುವ ಸಾರ್ವಜನಿಕರಿಗೆ ಬ್ಯಾಚ್‌ಗಳನ್ನಾಗಿ ಮಾಡಿ, ವಯಸ್ಕರಿಗೆ ರೂ.75/- ಗಳು ಮತ್ತು ಮಕ್ಕಳಿಗೆ ರೂ.50/-ಗಳನ್ನು ನಿಗಧಿಪಡಿಸಿ, ವರ್ಷಕ್ಕೆ ಶೇ.5% ಶುಲ್ಕವನ್ನು ಹೆಚ್ಚಿಸಿಕೊಳ್ಳಲು ಅನುಮತಿ ನೀಡಲು ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯ ವಿವಿಧ ಈಜುಕೊಳಗಳ ಶುಲ್ಕದ ರಸೀದಿಯನ್ನು ಸಹ ಅಡಕಗೊಳಿಸಿದ್ದು, ಕೆನ್ಸಿಂಗ್ ಟನ್ ಈಜುಕೊಳಕ್ಕೆ ಪ್ರತಿ ಗಂಟೆಗೆ ರೂ.70/- ಗಳಂತೆ, ಗ್ಲೋಬಲ್ ಸ್ವಿಮ್ ಸೆಂಟರ್‌ಗೆ ಪ್ರತಿ ಗಂಟೆಗೆ ರೂ.40/- ಗಳಂತೆ ಹಾಗೂ ವಿಜಯನಗರ ಅಕ್ವೇಟೆಕ್ ಸೆಂಟರ್‌ಗೆ ಪ್ರತಿ ಗಂಟೆಗೆ ರೂ.40/- ಗಳಿಗೆ ನಿಗಧಿಪಡಿಸಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನಗೆ ತರುತ್ತಾ, ಪಿ.ಎಂ ಸ್ವಿಮ್ಮಿಂಗ್ ಸೆಂಟರ್‌ರವರು ಕೋರಿರುವಂತೆ ಜಯನಗರ ಈಜುಕೊಳದ ಅವರಣದಲ್ಲಿ ನಿರ್ಮಿಸಿರುವ ಸುಮಾರು 50.00 ಮೀ x 20.65 ಮೀ ಅಳತೆಯ ಈಜುಕೊಳದ ನಿರ್ವಹಣೆಗೆ ಈಜುಕೊಳಕ್ಕೆ ಬರುವ ಸಾರ್ವಜನಿಕರಿಗೆ ಬ್ಯಾಚ್‌ಗಳನ್ನಾಗಿ ಮಾಡಿ ವಯಸ್ಕರಿಗೆ ರೂ.75/- ಗಳು ಮತ್ತು ಮಕ್ಕಳಿಗೆ ರೂ.50/-ಗಳನ್ನು ನಿಗಧಿಪಡಿಸಿ, ವರ್ಷಕ್ಕೆ ಶೇ.5% ಶುಲ್ಕವನ್ನು ಹೆಚ್ಚಿಸಿಕೊಳ್ಳುವ ಸಂಬಂಧ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯ ಅಧಿಕಾರವನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಲಯ ಆಯುಕ್ತರು (ದಕ್ಷಿಣ ವಲಯ) ರವರ ದಿನಾಂಕ:30-01-2021 ರ ಟಿಪ್ಪಣಿ.

**ತೀರ್ಮಾನ :** **ವಲಯ ಆಯುಕ್ತರು (ದಕ್ಷಿಣ ವಲಯ) ರವರ ದಿನಾಂಕ:30-01-2021 ರ ಟಿಪ್ಪಣಿಯನ್ನು ಒಪ್ಪಿದೆ.**

(ಗೌರವ ಗುಪ್ತ)
ಆಡಳಿತಗಾರರು

49

# ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22-02-2021 ರ ನಡವಳಿಗಳು

**ವಿಷಯದ ಸಂಖ್ಯೆ: 691/2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್ ನಂ.129ರ ವ್ಯಾಪ್ತಿಯ 2017-18ನೇ ಸಾಲಿನ ಲೆಕ್ಕ ಶೀರ್ಷಿಕೆ P-3143 ರಡಿ "Construction of Kempe Gowda Study Center at Bangalore University in ward no 129" ರ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಅನುಮೋದನೆ ನೀಡಲು ಕಾರ್ಯಪಾಲಕ ಅಭಿಯಂತರರು (ರಾಜರಾಜೇಶ್ವರಿನಗರ - ಯೋಜನಾ ವಿಭಾಗ) / ಮುಖ್ಯ ಅಭಿಯಂತರರು (ರಾಜರಾಜೇಶ್ವರಿನಗರ ವಲಯ) ರವರು ಶಿಫಾರಸ್ಸು ಮಾಡಿದ್ದು, ಕಾಮಗಾರಿಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| "Construction of Kempe Gowda Study Center at Bangalore University in ward no 129" (129-18-000001) | | | | |
|---|---|---|---|---|
| ಕ್ರ ಸ | ಕನಿಷ್ಠ ದರ ನಮೂದಿಸಿದ ಗುತ್ತಿಗೆದಾರರ ಹೆಸರು | ಕ.ಲೋ.ಎಲಾಖೆಯ 2018-19ನೇ ಸಾಲಿನ ದರ ಪಟ್ಟಿಯ ದರಗಳಂತೆ (ಮಂಜೂರಾದ ಅಂದಾಜು ಪಟ್ಟಿ) ಟೆಂಡರ್‌ಗಿಟ್ಟ ಮೊತ್ತ ರೂ.ಗಳಲ್ಲಿ | ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ / ಟೆಂಡರ್‌ಗಿಟ್ಟ ಮೊತ್ತ ಹೋಲಿಸಿದಾಗ ಶೇಕಡವಾರು (ರೂ.ಗಳಲ್ಲಿ) | ಕಾ.ಪಾ.ಅ(ಕೆಂಗೇರಿ ಕಛೇರಿಯ ಸಂಧಾನಿತ ಟೆಂಡರ್ ಮೊತ್ತ ಮತ್ತು ಮುಖ್ಯ ಅಭಿಯಂತರರು ರಾರಾನಗರ ವಲಯ ಕಛೇರಿಯ ಸಂಧಾನಿತ ಟೆಂಡರ್ ಮೊತ್ತ / ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡಾವಾರು (ರೂ.ಗಳಲ್ಲಿ) |
| 1 | M Rajendra (M.R.Constructions) | ರೂ.38,70,24,316.00 | ರೂ.44,34,35,856.50 ಶೇ.14.58% (+) ರಷ್ಟು ಹೆಚ್ಚುವರಿ | ರೂ.42,57,26,747.47 ಶೇ.10.00% (+) ರಷ್ಟು ಹೆಚ್ಚುವರಿ |

ಪ್ರಸ್ತಾಪಿತ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಿ ಯಶಸ್ವಿಯಾಗಿರುವ ಎಲ್-01 ಗುತ್ತಿಗೆದಾರರಾದ M Rajendra (M.R.Constructions) ರವರು ದರ ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.42,57,26,747.47 (ರೂ ನಲವತ್ತೆರಡು ಕೋಟಿ ಐವತ್ತೇಳು ಲಕ್ಷದ ಇಪ್ಪತ್ತಾರು ಸಾವಿರದ ಏಳು ನೂರ ನಲವತ್ತೇಳು ಮತ್ತು ನಲವತ್ತೇಳು ಪೈಸೆ ಮಾತ್ರ) ಗಳನ್ನು 2018-19ನೇ ಸಾಲಿನ ದರಪಟ್ಟಿಯ ದರಗಳಂತೆ (ಮಂಜೂರಾದ ಅಂದಾಜು ಪಟ್ಟಿ) ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಬಂದಂತಹ ಶೇ.10.00% (+) ರಷ್ಟು ಹೆಚ್ಚಿಗೆಯಿರುವ ಟೆಂಡರ್‌ಗೆ ಘನ ಸರ್ಕಾರದಿಂದ ಅನುಮೋದನೆ ಪಡೆಯಲು ಕೋರಿ, ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಟಿಪ್ಪಣಿಯನ್ನು ಮಂಡಿಸಲು ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಕಾಮಗಾರಿಯ ಟೆಂಡರ್‌ನ ಎಲ್-01 ಗುತ್ತಿಗೆದಾರರಾದ M Rajendra (M.R.Constructions) ರವರು ದರ ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.42,57,26,747.47 (ರೂ ನಲವತ್ತೆರಡು ಕೋಟಿ ಐವತ್ತೇಳು ಲಕ್ಷದ ಇಪ್ಪತ್ತಾರು ಸಾವಿರದ ಏಳು ನೂರ ನಲವತ್ತೇಳು ಮತ್ತು ನಲವತ್ತೇಳು ಪೈಸೆ ಮಾತ್ರ) ಗಳನ್ನು 2018-19ನೇ ಸಾಲಿನ ದರಪಟ್ಟಿಯ ದರಗಳಂತೆ (ಮಂಜೂರಾದ ಅಂದಾಜು ಪಟ್ಟಿ) ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಬಂದಂತಹ ಶೇ.10.00% (+) ರಷ್ಟು ಹೆಚ್ಚಿಗೆಯಿರುವ ಟೆಂಡರ್‌ಗೆ ಘನ ಸರ್ಕಾರದಿಂದ ಅನುಮೋದನೆ ಪಡೆಯಲು ಕೋರಿ, ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಆಸ್ತಿಗಳು) ಹಾಗೂ ವಲಯ ಆಯುಕ್ತರು (ರಾ.ರಾ.ನಗರ) ರವರ ದಿನಾಂಕ:04-02-2021 ರ ಟಿಪ್ಪಣಿ.

**<u>ತೀರ್ಮಾನ :</u>** **ವಿಶೇಷ ಆಯುಕ್ತರು (ಆಸ್ತಿಗಳು) ಹಾಗೂ ವಲಯ ಆಯುಕ್ತರು (ರಾ.ರಾ.ನಗರ) ರವರ ದಿನಾಂಕ:04-02-2021 ರ ಟಿಪ್ಪಣಿಯನ್ನು ಒಪ್ಪುತ್ತಾ, ಟೆಂಡರ್ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.**

(ಗೌರವ ಗುಪ್ತ)
ಆಡಳಿತಗಾರರು

56

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧಿಕಾರವನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:22-02-2021 ರ ನಡವಳಿಗಳು

**ವಿಷಯದ ಸಂಖ್ಯೆ: 690/2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಸಂಖ್ಯೆ:ನಅಇ 199 ಎಸ್.ಎ.ಸಿ 2016, ದಿನಾಂಕ:21-06-2016 ಮತ್ತು ಸಂಖ್ಯೆ:ನಅಇ 610 ಎಂಎನ್‌ವೈ 2014, ದಿನಾಂಕ:24-06-2017 ರ ಆದೇಶದಂತೆ ಶಿವಾನಂದ ವೃತ್ತದಲ್ಲಿ ಇಂಟಿಗ್ರೇಟೆಡ್ ಮೇಲ್ಸೇತುವೆ ನಿರ್ಮಾಣ ಕಾಮಗಾರಿಗೆ ನಗರೋತ್ಥಾನ ಅನುದಾನದ ಅಡಿಯಲ್ಲಿ ರೂ.60.00 ಕೋಟಿಗಳನ್ನು ಒದಗಿಸಲಾಗಿರುತ್ತದೆ. ಅದರಂತೆ ಸದರಿ ಕಾಮಗಾರಿಯನ್ನು ಟರ್ನ್‌ಕೀ ಟೆಂಡರ್ ಆಧಾರದಲ್ಲಿ ಕೈಗೊಳ್ಳಲು ಸರ್ಕಾರದ ಆದೇಶದಲ್ಲಿ ರೂ.19.85 ಕೋಟಿಗಳ ಮೊತ್ತದ ಟೆಂಡರ್ ಅನ್ನು ಗುತ್ತಿಗೆದಾರರಾದ ಮೆ॥ ಎಂ.ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ ಪ್ರೈ.ಲಿ ರವರಿಗೆ ವಹಿಸಲು ಅನುಮೋದನೆ ನೀಡಲಾಗಿರುತ್ತದೆ. ಅದರಂತೆ ಮಾನ್ಯ ಆಯುಕ್ತರವರ ಆದೇಶದಂತೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

ಮುಂದುವರೆದು, ಶಿವಾನಂದ ವೃತ್ತದಲ್ಲಿನ ಮೇಲು ಸೇತುವೆ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಕೆಲವು ಸ್ಥಳೀಯ ವ್ಯಕ್ತಿಗಳು ಘನ ಉಚ್ಚನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ, ಅದರಂತೆ ಉಚ್ಚ ನ್ಯಾಯಾಲಯವು ಎಲ್ಲಾ ರೀತಿಯ ತಾಂತ್ರಿಕ ಮತ್ತು ವೈಜ್ಞಾನಿಕ ವಿವರಗಳನ್ನು ಪರಿಗಣಿಸಿ ದಿನಾಂಕ:08-01-2018 ರಂದು ನೀಡಿದ ನ್ಯಾಯಾಲಯದ ಆದೇಶದನ್ವಯ ಪಾಲಿಸುವ ಸಲುವಾಗಿ ಪರಿಷ್ಕೃತ GAD ಮತ್ತು ಪರಿಷ್ಕೃತ ಅಂದಾಜು ಪಟ್ಟಿ ತಯಾರಿಸಿ, ಅದರಂತೆ ಪರಿಷ್ಕೃತ ಟೆಂಡರ್ ಮೊತ್ತಕ್ಕೆ ಪ್ರಸ್ತಾವನೆಯನ್ನು ತಯಾರಿಸಿ, ವಿವಿಧ ದಿನಾಂಕಗಳಂದು ಪತ್ರ ಮುಖೇನ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿತ್ತು.

ಸರ್ಕಾರದ ಸೂಚನೆಯ ಪ್ರಕಾರ ಮಾರ್ಪಡಿಸಲಾದ ಯೋಜನೆಯನ್ನು ಅನುಷ್ಠಾನಗೊಳಿಸಲು ಗುತ್ತಿಗೆ ಸಂಸ್ಥೆಯವರಾದ M/s.Venkata Rao Infra Projects Pvt Ltd., ರವರಿಗೆ ಘನ ಸರ್ಕಾರದ ಆದೇಶ ಸಂಖ್ಯೆ:ನಅಇ 22 ಎಂ.ಎನ್.ವೈ 2019, ದಿನಾಂಕ:17-04-2020 (10-07-2020) ರಲ್ಲಿ ಬೆಂಗಳೂರಿನ ಹರೆ ಕೃಷ್ಣ ರಸ್ತೆಯ ಶಿವಾನಂದ ವೃತ್ತದ ಗ್ರೇಡ್ ಸೆಪರೇಟರ್ ಯೋಜನೆಗೆ ರೂ.43,68,99,097.69 (ನಲವತ್ಮೂರು ಕೋಟಿ ಅರವತ್ತೆಂಟು ಲಕ್ಷದ ತೊಂಬತ್ತೊಂಬತ್ತು ಸಾವಿರದ ತೊಂಬತ್ತೇಳು ರೂಪಾಯಿ ಅರವತ್ತೊಂಬತ್ತು ಪೈಸೆಗಳು ಮಾತ್ರ) ಮೊತ್ತದ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಭೂಸ್ವಾಧೀನ ವೆಚ್ಚಕ್ಕೆ ರೂ.9.00 ಕೋಟಿ ಮೊತ್ತವನ್ನು ನಿಗಧಿಪಡಿಸಿದ್ದು, ಅನುಮೋದನೆ ನೀಡಿ ಆದೇಶಿಸಿದೆ. ಅದರಂತೆ ಪರಿಷ್ಕೃತ ಕಾರ್ಯದೇಶ ನೀಡಲಾಗಿದ್ದು ಪ್ರಸ್ತುತ ಶೇ.70% ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

ಸರ್ಕಾರದಿಂದ ಅನುಮೋದನೆಯಾಗಿರುವ ಪರಿಷ್ಕೃತ ಅಂದಾಜಿನಂತೆ ಸೇತುವೆಯ ವಿನ್ಯಾಸದಲ್ಲಿ ಪಶ್ಚಿಮ ಭಾಗದ ರ್‍ಯಾಂಪ್‌ನ ಎರಡೂ ಸರ್ವೀಸ್ ರಸ್ತೆಗಳನ್ನು ನಿರ್ಮಿಸಲು ಅವಶ್ಯವಿರುವ ಒಟ್ಟಾಗಿ 7 ಸ್ವತ್ತುಗಳ ಒಟ್ಟು 579.52 ಚ.ಮೀ (6237.92 ಚ.ಅಡಿ) ವಿಸ್ತೀರ್ಣದ ಖಾಸಗಿ ಜಾಗವನ್ನು ಟಿ.ಡಿ.ಆರ್ ಮೂಲಕ ಪಡೆಯುವ ಬಗ್ಗೆ ಫಾರಂ-1 ರ ಅಧಿಸೂಚನೆಯಂತೆ ಸ್ವತ್ತುಗಳ ಮಾಲೀಕರೊಂದಿಗೆ ಪಾಲಿಕೆಯ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:19-01-2021 ರಂದು ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಹಾಜರಿದ್ದ ಭೂಮಾಲೀಕರುಗಳಿಗೆ ಎಲ್ಲ ವಿವರ ಮತ್ತು ನಕ್ಷೆಗಳನ್ನು ನೀಡಿ

ಟಿ.ಡಿ.ಆರ್ ಮೂಲಕ ಜಾಗವನ್ನು ಪಾಲಿಕೆಗೆ ಹಸ್ತಾಂತರಿಸುವಂತೆ ಮನವೊಲಿಸಲು ಪ್ರಯತ್ನ ಮಾಡಲಾಯಿತು. ಆದರೆ ಸ್ವತ್ತುಗಳ ಮಾಲೀಕರು ಟಿ.ಡಿ.ಆರ್ ಬದಲಿಗೆ ಯೋಜನೆಗೆ ಜಾಗ ನೀಡಲು ಒಪ್ಪಿಗೆಯಿಲ್ಲವೆಂದು ತಿಳಿಸಿ ಅದರ ಬದಲು ಯೋಜನೆಗೆ ಬಿಟ್ಟುಕೊಡುವ ಜಾಗಕ್ಕೆ ಅನುಗುಣವಾಗಿ ಆರ್ಥಿಕ ಪರಿಹಾರ ನೀಡುವ ಬಗ್ಗೆ ಕ್ರಮ ಕೈಗೊಂಡಲ್ಲಿ ಜಾಗವನ್ನು ಪಾಲಿಕೆಗೆ ನೀಡುವ ಬಗ್ಗೆ ಪರಿಗಣಿಸುವುದಾಗಿ ತಿಳಿಸಿದ್ದು, ಆಕ್ಷೇಪಣೆ ಪತ್ರಗಳನ್ನು ಸಲ್ಲಿಸಿರುತ್ತಾರೆ. ಆದರೆ ಸದರಿ ಯೋಜನೆಗೆ ಮೇಲೆ ತಿಳಿಸಿರುವ ಜಾಗವು ಅತ್ಯವಶ್ಯಕವಾಗಿ ಬೇಕಾಗಿರುವ ಪ್ರಯುಕ್ತ ಮುಂದಿನ ಪ್ರಕ್ರಿಯೆ ನಡೆಸಬೇಕಾಗಿದ್ದು, ಈ ರೀತಿಯ ಪ್ರಕರಣಗಳಲ್ಲಿ ಕೆ.ಎಂ.ಸಿ.ಕಾಯ್ದೆ 1976 ರಲ್ಲಿ ನೇರವಾಗಿ ಜಾಗವನ್ನು ಖರೀದಿಸಲು ಅವಕಾಶವಿದ್ದು, ಅದರಂತೆ ಸದರಿ 579.52 ಚ.ಮೀ (6237.92 ಚ.ಅಡಿ) ಖಾಸಗಿ ಜಾಗವನ್ನು ಕೆ.ಎಂ.ಸಿ ಕಾಯ್ದೆ 1976 ರ ಕಲಂ ಸಂಖ್ಯೆ 175 ರಂತೆ ನೇರವಾಗಿ ಭೂಮಿಯನ್ನು ಖರೀದಿಸಲು ಅಥವಾ ಬಿಬಿಎಂಪಿ ಕಾಯ್ದೆ-2020 ರಂತೆ ಕ್ರಮ ವಹಿಸಿ 175 ರಂತೆ ನೇರವಾಗಿ ಭೂಮಿಯನ್ನು ಖರೀದಿಸಲು ಅಥವಾ ಬಿಬಿಎಂಪಿ ಕಾಯ್ದೆ-2020 ರಂತೆ ಕ್ರಮ ವಹಿಸಿ ಭೂಸ್ವಾಧೀನ ಪಡಿಸಿಕೊಳ್ಳಲು ಸುಮಾರು ರೂ.30.00 ಕೋಟಿಗಳ ಪರಿಹಾರದ ಮೊತ್ತ ಅವಶ್ಯಕತೆ ಇರುತ್ತದೆ (ಹಾಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿ ದರ ಹಾಗೂ ಮಾಲೀಕರು ಸಲ್ಲಿಸಿರುವ ದಾಖಲೆಗಳಂತೆ) ಸರ್ಕಾರದಿಂದ ನಿಗಧಿಪಡಿಸಿರುವ ರೂ.9.00 ಕೋಟಿಗಳು ಸಾಕಾಗುವುದಿಲ್ಲ ಹಾಗೂ ರೂ.21.00ಕೋಟಿಗಳ ಹೆಚ್ಚುವರಿ ಮೊತ್ತ ಬೇಕಾಗುತ್ತದೆ. ಯೋಜನೆಯು ಪ್ರಗತಿಯಲ್ಲಿದ್ದು, ಬೇರೆ ಎಲ್ಲಾ ಅಂಶಗಳು ಪೂರ್ಣಗೊಳ್ಳುವ ಪ್ರಯುಕ್ತ ಪಶ್ಚಿಮ ಭಾಗದ ರ್‍ಯಾಂಪ್ ಉಳಿಕೆಯಾದಲ್ಲಿ ಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ಲೋಕಾರ್ಪಣೆ ಮಾಡಲು ಸಾಧ್ಯವಾಗುವುದಿಲ್ಲ.

ಯೋಜನೆಯನ್ನು ದಿನಾಂಕ:30-04-2021ರೊಳಗೆ ಪೂರ್ಣಗೊಳಿಸಬೇಕಾಗಿರುವುದರಿಂದ ಸದರಿ ಸ್ವತ್ತುಗಳನ್ನು ಶೀಘ್ರವಾಗಿ ಸ್ವಾಧೀನಪಡಿಸಿಕೊಳ್ಳಬೇಕಾದ ಅನಿವಾರ್ಯತೆ ಇರುತ್ತದೆ. ಆದರೆ ಸ್ವತ್ತುಗಳ ಮಾಲೀಕರು ಟಿ.ಡಿ.ಆರ್ ಮೂಲಕ ಜಾಗವನ್ನು ನೀಡಲು ಒಪ್ಪಿಗೆ ಇಲ್ಲ ಎಂದು ತಿಳಿಸಿರುವ ಹಿನ್ನೆಲೆಯಲ್ಲಿ ಮುಂದಿನ ಹಂತವಾದ ಭೂಸ್ವಾಧೀನ ಪ್ರಕ್ರಿಯೆಯನ್ನು ನಿಯಮಾವಳಿಗಳ ರೀತ್ಯಾ ಕೈಗೊಳ್ಳಲು ಸಾಕಷ್ಟು ಸಮಯಾವಕಾಶ ಬೇಕಾಗಿರುವುದರಿಂದ ಅನಗತ್ಯ ವಿಳಂಬ ತಪ್ಪಿಸಲು ಕೆ.ಎಂ.ಸಿ ಕಾಯ್ದೆ 1976 ರ ಕಲಂ ಸಂಖ್ಯೆ 175 ರಂತೆ ನೇರವಾಗಿ ಭೂಮಿಯನ್ನು ಖರೀದಿಸಲು ಅಥವಾ ಬಿಬಿಎಂಪಿ ಕಾಯ್ದೆ-2020 ರಂತೆ ಸ್ವಾಧೀನ ಪಡಿಸಿಕೊಳ್ಳಲು ಬೇಕಾಗುವ ಹೆಚ್ಚುವರಿ ಅಂದಾಜು ರೂ.21.00 ಕೋಟಿ ಮೊತ್ತವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2020-21ನೇ ಸಾಲಿನ ಆಯವ್ಯಯದಲ್ಲಿ ಮರು ಹೊಂದಾಣಿಕೆ ಮಾಡಿಕೊಂಡು ಅನುದಾನ ಒದಗಿಸುವ ಸಂಬಂಧ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯ ಅಧಿಕಾರವನ್ನು ಚಲಾಯಿಸಿ ತೀರ್ಮಾನಿಸಲು ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08-02-2021 ರ ಟಿಪ್ಪಣಿ.

**ತೀರ್ಮಾನ : ಆಯುಕ್ತರವರ ದಿನಾಂಕ:08-02-2021 ರ ಟಿಪ್ಪಣಿಯನ್ನು ಒಪ್ಪಿದೆ.**

(ಗೌರವ ಗುಪ್ತ)
ಆಡಳಿತಗಾರರು

59

# ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22-02-2021 ರ ನಡವಳಿಗಳು

**ವಿಷಯದ ಸಂಖ್ಯೆ: 633/2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2019-20ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-3740 ಅಡಿಯಲ್ಲಿ Improvements to roads at Vallabhanagar and Surrounding area in Uttarahalli Ward no 184, Improvements to roads at Kannika Parameshwari Temple street and Veeranjaneya Temple street in Uttarahalli ward no 184, Improvements of cross roads at Venkataswamappa Layout in Uttarahalli ward no 184, Improvements of roads at Gopalkrishna Layout in ward no 184 Uttarahalli ಕಾಮಗಾರಿಯ ಅಂದಾಜು ಮೊತ್ತ ರೂ.360.00 ಲಕ್ಷಗಳಿಗೆ ಜಾಬ್ ಸಂಖ್ಯೆ: 184-20-000087 ಪಡೆಯಲಾಗಿರುತ್ತದೆ.

ಸದರಿ ಕಾಮಗಾರಿಯನ್ನು ಕೈಗೊಳ್ಳಲು ಅಂದಾಜು ಪಟ್ಟಿಯನ್ನು 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ಮತ್ತು ಅನುಮೋದಿತ ದರಗಳ ದರಪಟ್ಟಿಯಂತೆ ತಯಾರಿಸಲಾಗಿರುತ್ತದೆ.

ಸದರಿ ಕಾಮಗಾರಿಯನ್ನು ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿದ್ದರಿಂದ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿಯನ್ನು ನಿರೀಕ್ಷಿಸಿ ಕಾರ್ಯಪಾಲಕ ಅಭಿಯಂತರರು (ಬೆಂಗಳೂರು ದಕ್ಷಿಣ ವಿಭಾಗ) ರವರು ದಿನಾಂಕ:29.06.2020 ರಂದು ಟೆಂಡರ್ ಆಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಯ ತಾಂತ್ರಿಕ ಬಿಡ್ ಅನ್ನು ದಿನಾಂಕ:23.07.2020 ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ ಮೂವರು ಬಿಡ್ಡುದಾರರಾದ ಶ್ರೀ.ಎಸ್.ಕೆ.ಮೂರ್ತಿ, ಶ್ರೀ.ಗಿರೀಶ್.ಜೆ ಮತ್ತು ಶ್ರೀ.ವಾಸು ಸೇವರ್ತಿ (ಮೆ॥ಸಾನ್ವಿ ಅರ್ಥ್ ಮೂವರ್ಸ್ ಅಂಡ್ ಕನ್ಸ್ಟ್ರಕ್ಷನ್ಸ್) ರವರುಗಳು ಭಾಗವಹಿಸಿದ್ದು, ತಾಂತ್ರಿಕವಾಗಿ ಅರ್ಹರಾಗಿರುವ ಸದರಿ ಬಿಡ್ಡುದಾರರ ಆರ್ಥಿಕ ಬಿಡ್ ತೆರೆಯಲು ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ ವಲಯ) ರವರು ಅನುಮೋದಿಸಿರುವಂತೆ ದಿನಾಂಕ:16.10.2020 ರಂದು ಆರ್ಥಿಕ ಬಿಡ್ ಅನ್ನು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತೆ ಇರುತ್ತದೆ.

| ಕ್ರ. ಸಂ | ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ ರೂ ಗಳಲ್ಲಿ (2018-19ನೇ ಸಾಲಿನ ದರಪಟ್ಟಿಯಂತೆ ಮಂಜುರಾತಿ ದರ) | ಗುತ್ತಿಗೆದಾರರು ನಮೂದಿಸಿದ ಮೊತ್ತ (ರೂ. ಗಳಲ್ಲಿ) | ಗುತ್ತಿಗೆದಾರರು ನಮೂದಿಸಿದ ಮೊತ್ತಕ್ಕೆ ಹೋಲಿಸಿದಾಗ ಶೇಕಡವಾರು ಪ್ರೀಮಿಯಂ | ಷರಾ |
|---|---|---|---|---|---|
| 01 | ಶ್ರೀ.ಎಸ್.ಕೆ.ಮೂರ್ತಿ | ರೂ.3,03,24,678.52 | ರೂ.2,84,31,325.58 | ಶೇ.6.24% ಕಡಿಮೆ | L1 |
| 02 | ಶ್ರೀ.ಗಿರೀಶ್.ಜೆ | | ರೂ.3,18,37,940.22 | ಶೇ.4.99% ಹೆಚ್ಚು | L2 |
| 03 | ಶ್ರೀ.ವಾಸು ಸೇವರ್ತಿ (ಮೆ॥ ಸಾನ್ವಿ ಅರ್ಥ್ ಮೂವರ್ಸ್ ಅಂಡ್ ಕನ್ಸ್ಟ್ರಕ್ಷನ್ಸ್) | | ರೂ.3,21,44,182.35 | ಶೇ.6.00% ಹೆಚ್ಚು | L3 |

ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿದೆ.

1. ಪ್ರಸ್ತಾಪಿತ ಕಾಮಗಾರಿಗಳ ಸ್ಥಳ ಪರಿವೀಕ್ಷಣೆ ಮಾಡಿ ಕಾಮಗಾರಿಯ ಅವಶ್ಯಕತೆ ಬಗ್ಗೆ ಹಾಗೂ ಸದರಿ ಕಾಮಗಾರಿಯನ್ನು ಪಾಲಿಕೆಯ ಹಿಂದಿನ ಆಯವ್ಯಯಗಳಲ್ಲಿ/ ಅನುದಾನಗಳಲ್ಲಿ ಕೈಗೊಂಡಿಲ್ಲದೆ ಇರುವ ಮತ್ತು ಪುನರಾವರ್ತನೆಯಾಗದೇ ಇರುವುದನ್ನು ಖಚಿತ ಪಡಿಸಿಕೊಳ್ಳುವುದು.
2. ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಮುಲೆಅ/ಆಯವ್ಯ/2019-20/ಪಿಆರ್/11/2018-19, ದಿನಾಂಕ:12.06.2019 ಮತ್ತು ಆಯುಕ್ತರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ:ಬಿಬಿಎಂಪಿ/ಆ/ಪಿಆರ್/5287/2019-20, ದಿನಾಂಕ:05.11.2019 ಮತ್ತು ಬಿಬಿಎಂಪಿ/ಪಿ/ಪಿಆರ್/6166/2019-20, ದಿನಾಂಕ:13.12.2019 ರಲ್ಲಿನ ನಿರ್ದೇಶನಗಳನ್ನು/ಪ್ರಕ್ರಿಯೆಗಳನ್ನು ಅನುಸರಿಸತಕ್ಕದ್ದು.
3. ಕಾಮಗಾರಿಗೂ ಮುನ್ನ ಹಾಗೂ ನಂತರದ ಜಿಪಿಎಸ್‌ಯುಳ್ಳ ಛಾಯಾ ಚಿತ್ರಗಳನ್ನು ಸಲ್ಲಿಸತಕ್ಕದ್ದು.

ಈ ಮೇಲ್ಕಂಡ ವರದಿಯ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡುವ ಸಂಬಂಧ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಅರೋಗ್ಯ) ಹಾಗೂ ವಲಯ ಆಯುಕ್ತರು (ಬೊಮ್ಮನಹಳ್ಳಿ) ರವರ ದಿನಾಂಕ:12-01-2021 ರ ಟಿಪ್ಪಣಿ.

1. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.360.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಅಹ್ವಾನಿಸಲಾಗಿರುವುದರಿಂದ, ಘಟನ್ನೋತ್ತರ ಆಡಳಿತಾತ್ಮಕ ಅನುಮೋದನೆ.
2. ಸದರಿ ಕಾಮಗಾರಿಯನ್ನು ಸಾರ್ವಜನಿಕರ ಸೇವಾ ಹಾಗೂ ಆರೋಗ್ಯ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಎಲ್-01 ಗುತ್ತಿಗೆದಾರರಾದ ಶ್ರೀ.ಎಸ್.ಕೆ.ಮೂರ್ತಿ ರವರು ನಮೂದಿಸಿರುವ ಬಿಡ್ ಮೊತ್ತವಾದ ರೂ.2,84,31,325.58 ಗಳನ್ನು ಟೆಂಡರ್‌ಗಿಟ್ಟ ಮೊತ್ತ ರೂ.3,03,24,678.52 ಹೋಲಿಸಿದಾಗ ಬಂದಂತಹ ಶೇ.6.24% (-) ರಷ್ಟು ಕಡಿಮೆ ದರಗಳ ಟೆಂಡರ್ ಪ್ರಿಮೀಯಂಗೆ (2018-19ನೇ ಸಾಲಿನ ಎಸ್.ಆರ್.ದರಪಟ್ಟಿಯಂತೆ) ಅನುಮೋದನೆ.

**ತೀರ್ಮಾನ :** **ವಿಶೇಷ ಆಯುಕ್ತರು (ಅರೋಗ್ಯ) ಹಾಗೂ ವಲಯ ಆಯುಕ್ತರು (ಬೊಮ್ಮನಹಳ್ಳಿ) ರವರ ದಿನಾಂಕ:12-01-2021 ರ ಟಿಪ್ಪಣಿಯನ್ನು ಒಪ್ಪಿದೆ.**

(ಗೌರವ ಗುಪ್ತ)
ಆಡಳಿತಗಾರರು